ವಿಪಶ್ಯನ ವಾರ್ತೆ
VIPASSANA VARTE

ಕನ್ನಡ ಮಾಸಪತ್ರಿಕೆ, **10 ಮಾರ್ಚ್, 2023** ಬೆಂಗಳೂರು, ಸಂಪುಟ 8, ಸಂಚಿಕೆ 11, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 March 2023**, Bengaluru, Vol. 8, Issue No.11, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500. Subscription :Annual Rs. 30; Life : Rs. 500/-
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್. Published by: Karnataka Vipassana Prachara Samiti Trust.

## ಧಮ್ಮ ಪದಗಳು

| | |
|---|---|
| ಚಿರಂ ತಿಟ್ಠತು ಸದ್ಧಮ್ಮೊ,<br>ಧಮ್ಮೆ ಹೋಂತು ಸಗಾರವೋ.<br>ಸಬ್ಬೇ ಪಿ ಸತ್ತಾ ಕಾಲೇನ,<br>ಸಮ್ಮಾ ದೇವೋ ಪವಸ್ಸತು | ಪರಿಶುದ್ಧ ಧರ್ಮವು ದೀರ್ಘಕಾಲ ಉಳಿಯಲಿ. ಧರ್ಮದ ಬಗ್ಗೆ ಎಲ್ಲಾ ಜನರೂ ಗೌರವ ಮತ್ತು ಗಾಢವಾದ ಪೂಜ್ಯ ಭಾವನೆ ಹೊಂದಿರಲಿ.<br>ವರುಣ ದೇವನು ಎಲ್ಲಾ ಜೀವಿಗಳ ಮೇಲೆ ಸರಿಯಾದ ಸಮಯದಲ್ಲಿ ಮಳೆ ಸುರಿಸಲಿ. |

ಅಟ್ಠಸಾಲಿನಿ, ನಿಗಮನಕಥಾ

## ಭಾರತದಲ್ಲಿ ಮೊದಲ ವಿಪಶ್ಯನ ಧ್ಯಾನ ಶಿಬಿರ

**ಆಚಾರ್ಯ ಶ್ರೀ ಎಸ್.ಎನ್. ಗೋಯಂಕ (1924–2013)**

(ಜೂನ್ 1998 ರ ಇಂಗ್ಲಿಷ್ ವಿಪಶ್ಯನ ವಾರ್ತಾಪತ್ರದಿಂದ ಅನುವಾದಿಸಲಾಗಿದೆ.)

20ನೇ ಜೂನ್ 1969 ನನ್ನ ಜೀವನದ ಅತ್ಯಂತ ಪ್ರಮುಖವಾದ ದಿನ. ಆ ದಿನ ನನ್ನ ಪೂಜ್ಯ ಗುರುಗಳಾದ ಸಯಾಜಿ ಉ ಬಾ ಖಿನ್‌ರವರು ನನ್ನನ್ನು ವಿಪಶ್ಯನ ಧ್ಯಾನದ ಆಚಾರ್ಯರನ್ನಾಗಿ ನೇಮಕಮಾಡಿ ನನಗೆ ದೊಡ್ಡ ಜವಾಬ್ದಾರಿ ಕೊಟ್ಟರು. ಈ ಹಿಂದಿನ ವರ್ಷಗಳಲ್ಲಿ ನನ್ನನ್ನು ತಮ್ಮ ಸಹಾಯಕನನ್ನಾಗಿ ಮಾಡಿಕೊಂಡು ತರಬೇತಿ ನೀಡಿ ಈ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಸಮರ್ಥನನ್ನಾಗಿಸಿದರು. ಈಗ ಆ ಜವಾಬ್ದಾರಿಯನ್ನು ಸಫಲಗೊಳಿಸುವ ಸಮಯ ಬಂದಿತ್ತು. ಮಾರನೆಯ ದಿನ ನಾನು ನನ್ನ ಜನ್ಮಭೂಮಿ ಮ್ಯಾನ್ಮಾರ್‌ನ್ನು (ಬರ್ಮಾ) ಬಿಟ್ಟು ನನ್ನ ಪೂರ್ವಜರ ನಾಡಾದ ಭಾರತಕ್ಕೆ ಪ್ರಯಾಣಿಸಿದೆ. 2500 ವರ್ಷಗಳ ಹಿಂದೆ ವಿಪಶ್ಯನ ಧ್ಯಾನವು ಭಾರತದಿಂದ ಮ್ಯಾನ್ಮಾರ್‌ಗೆ ಬಂದಿತ್ತು. ತನ್ನನ್ನು ಸ್ವೀಕರಿಸಿದ ನಾಡಿನಲ್ಲಿ ಅದು ಸಯಾಜಿ ಉ ಬಾ ಖಿನ್ ಅವರ ತನಕ ಆಚಾರ್ಯರುಗಳ ಪರಂಪರೆಯಲ್ಲಿ ರಕ್ಷಿಸಲ್ಪಟ್ಟಿತ್ತು. ಭಾರತದಲ್ಲಿ ಈ ಧ್ಯಾನ ವಿಧಾನವು ಸಂಪೂರ್ಣವಾಗಿ ಹೊರಟು ಹೋಗಿತ್ತು. ಜನರು ವಿಪಶ್ಯನದ ಹೆಸರನ್ನೂ ಮರೆತಿದ್ದರು.

ಈಗ ವಿಪಶ್ಯನವು ತನ್ನ ಮೂಲ ದೇಶವಾದ ಭಾರತಕ್ಕೆ ಹಿಂದಿರುಗಬೇಕು ಎಂಬುದು ಸಯಾಜಿ ಉ ಬಾ ಖಿನ್ ಅವರ ಬಯಕೆಯಾಗಿತ್ತು. ಇದು ಭಾರತದ ಜನರಿಗೆ ಪ್ರಯೋಜನ ನೀಡುವುದಲ್ಲದೆ ಮ್ಯಾನ್ಮಾರ್ ದೇಶವು ಈ ಮುಕ್ತಿದಾಯಿನಿ ಧ್ಯಾನ ಸಾಧನೆಯ ಸಾಲವನ್ನು ಭಾರತಕ್ಕೆ ಹಿಂದಿರುಗಿಸಲೂ ಸಾಧ್ಯವಾಗಿಸುತ್ತದೆ. ಈ ಬೆಲೆ ಕಟ್ಟಲಾಗದ ಆಧ್ಯಾತ್ಮಿಕ ಬೋಧನೆಯು ಭಾರತಕ್ಕೆ ಹಿಂದಿರುಗುವುದು ಮಾತ್ರವಲ್ಲ, ಅದು ಅಲ್ಲಿ ಸ್ಥಿರಗೊಂಡ ಮೇಲೆ ಬಹುಜನರ ಕಲ್ಯಾಣಕ್ಕಾಗಿ ಜಗತ್ತಿನಾದ್ಯಂತ ಹರಡಬೇಕು ಎಂಬುದು ಅವರ ಬಲವಾದ ಧಮ್ಮ ಬಯಕೆಯಾಗಿತ್ತು. ಅವರ ಈ ಶ್ರೇಷ್ಠ ಬಯಕೆಯನ್ನು ಈಡೇರಿಸಲು ನಾನು ನನ್ನ ಶಕ್ತಿಮೀರಿ ಪ್ರಯತ್ನಿಸುತ್ತೇನೆ ಎಂದು ಅವರಿಗೆ ಆಶ್ವಾಸನೆ ಕೊಟ್ಟಿದ್ದೆ.

ಭಾರತವು ಕಳೆದುಹೋಗಿದ್ದ ತನ್ನ ನಿಧಿಯನ್ನು ತಡಮಾಡದೆ ಸ್ವೀಕರಿಸುತ್ತದೆ ಎಂದು ಸಯಾಜಿ ಉ ಬಾ ಖಿನ್ ಅವರು ಬಲವಾಗಿ ನಂಬಿದ್ದರು. ಭಾರತದಲ್ಲಿ ಈ ಸಮಯದಲ್ಲಿ ಅಪರಿಮಿತ 'ಪಾರಮಿತಾ'ಗಳನ್ನು (ಪರಿಪೂರ್ಣತೆಗಳನ್ನು) ಹೊಂದಿರುವ ಅನೇಕ ಜನರು ಜನ್ಮವೆತ್ತಿದ್ದಾರೆ ಮತ್ತು ಅವರ ಹಿಂದಿನ ಪುಣ್ಯಕರ್ಮಗಳು ಸ್ವಾಭಾವಿಕವಾಗಿಯೇ ಅವರನ್ನು ವಿಪಶ್ಯನದ ಕಡೆ ಆಕರ್ಷಿಸುತ್ತವೆ ಎಂದು ಅವರು ಪದೇ ಪದೇ ಹೇಳುತ್ತಿದ್ದರು.

"ವಿಪಶ್ಯನದ ಘಂಟೆ ಮೊಳಗಿದೆ. ಭಾರತದಲ್ಲಿ ಅದರ ಪುನರುಜ್ಜೀವನ ಆಗಿಯೇ ಆಗುತ್ತದೆ ಮತ್ತು ಅದು ಈಗ ಆಗುತ್ತದೆ" ಎಂಬ ನನ್ನ ಆಚಾರ್ಯರ ಮೈತ್ರಿ ತುಂಬಿದ ಮಾತುಗಳು ಪದೇಪದೇ ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತಿದ್ದವು. ಇದು ನನ್ನ ಆಚಾರ್ಯರ ಭವಿಷ್ಯವಾಣಿ ಮಾತ್ರ ಅಲ್ಲ ; ಸಾವಿರಾರು ವರ್ಷಗಳ ಹಿಂದೆ ಜೀವಿಸಿದ್ದ ಸಂತರುಗಳ ಭವಿಷ್ಯವಾಣಿಯೂ ಆಗಿತ್ತು. ನನಗೆ ಅವರ ಆಶೀರ್ವಾದ ಮತ್ತು ದೃಢವಿಶ್ವಾಸದ ಈ ಭವಿಷ್ಯವಾಣಿಯು ನನ್ನ ಜೀವನ ಪಯಣದಲ್ಲಿ ನನಗೆ ಶಕ್ತಿ ಒದಗಿಸುತ್ತಿದ್ದವು.

ಆದರೂ, ಭಾರತಕ್ಕೆ ಬಂದ ಪ್ರಾರಂಭದ ದಿನಗಳಲ್ಲಿ, ಕಷ್ಟಗಳೇ ನನ್ನನ್ನು ಸುತ್ತುವರಿದಿದ್ದಂತೆ ಕಂಡಿತು; ನಾನು ಯಶಸ್ವಿಯಾಗಲು ಸಾಧ್ಯವೇ ಎಂಬ ಅನುಮಾನ ಶುರುವಾಯಿತು. ಶಿಬಿರ ಎಲ್ಲಿ ನಡೆಸುವುದು? ಅದನ್ನು ಸಂಘಟಿಸುವುದು ಹೇಗೆ? ಯಾರು ಅದನ್ನು ಸಂಘಟಿಸುತ್ತಾರೆ? ಕುಟುಂಬ ಮತ್ತು ಮನೆಯನ್ನು ಬಿಟ್ಟು ಯಾರು ನನ್ನ ಜೊತೆ ಹತ್ತು ದಿನಗಳು ಇರುತ್ತಾರೆ? ಇಷ್ಟೊಂದು ಅಗಾಧವಾದ ಜನಸಂಖ್ಯೆಯಿರುವ ಈ ದೇಶದಲ್ಲಿ ಕೆಲವರಿಗೆ ಮಾತ್ರ ನಾನು ಗೊತ್ತಿದ್ದೇನೆ!

ನನಗೆ ಬಹಳ ಆಪ್ತವಾಗಿದ್ದವರು ಎಂದರೆ ಭಾರತದಲ್ಲಿ ವಾಸಿಸುತ್ತಿದ್ದ ನನ್ನ ಸ್ವಂತ ಕುಟುಂಬದವರು. ಅವರಿಂದ ನನಗೆ ಸಹಾಯ ಸಿಗಬಹುದೆಂಬ ಬಹಳ ನಿರೀಕ್ಷೆಯಿಂದ ನಾನು ಬಂದಿದ್ದೆ. ಆದರೆ ನಾನು ಬರುವ ಸ್ವಲ್ಪ ಮೊದಲೇ ಅವರಲ್ಲಿ ಅನೇಕರು 'ಆನಂದ ಮಾರ್ಗ'ದ ಅನುಯಾಯಿಗಳಾಗಿದ್ದರು. ನಾನು ಮ್ಯಾನ್ಮಾರ್‌ನಲ್ಲಿದ್ದಾಗಲೇ ಈ ವಿಷಯ ನನಗೆ ತಿಳಿದಿತ್ತು. ಆದರೆ, ನನಗೆ ತಿಳಿಯದೇ ಇದ್ದದ್ದೆಂದರೆ, ಈ ಎಲ್ಲಾ ಕುಟುಂಬ ಸದಸ್ಯರೂ ಆನಂದ ಮಾರ್ಗದ ಬಗ್ಗೆ ದುರಭಿಮಾನವುಳ್ಳವರಾಗಿದ್ದು ವಿಪಶ್ಯನದ ಬಗೆಗಿನ ವಿವರಣೆಯನ್ನೂ ಕೇಳಲು ಸಿದ್ಧರಿಲ್ಲ ಎಂಬುದು. ಅವರೆಲ್ಲಾ ವಿಪಶ್ಯನ ಶಿಬಿರಕ್ಕೆ ಸೇರಿ ಈ ಸಾಧನಾ ವಿಧಾನವನ್ನು ಕಲಿಯುವ ಸಾಧ್ಯತೆ ಎಳ್ಳಷ್ಟೂ ಇಲ್ಲವೆಂಬಂತೆ ತೋರಿತು ಮತ್ತು ಶಿಬಿರ ಆಯೋಜಿಸುವಲ್ಲಿ ಅವರು ಸಹಕರಿಸುವ ಸಾಧ್ಯತೆ ನನಗೆ ಕಾಣಲಿಲ್ಲ.

ಜೊತೆಗೆ, ನನಗಿಂತ ಮುಂಚೆ ಮ್ಯಾನ್ಮಾರ್‌ನಿಂದ ಬಂದಿದ್ದ, ವಿಪಶ್ಯನ ಸಾಧಕರಾಗಿದ್ದ ಕುಟುಂಬ ಸದಸ್ಯರು ನಿರುತ್ಸಾಹಗೊಂಡಿದ್ದರು. ಏಕೆಂದರೆ ಆರ್ಥಿಕ ಬದಲಾವಣೆಗಳಿಂದ ಅವರು ಎಲ್ಲವನ್ನೂ ಕಳೆದುಕೊಂಡಿದ್ದರು. ಇವರ್ಯಾರೂ ಶಿಬಿರ ಸಂಘಟಿಸುವಲ್ಲಿ ನನಗೆ ಸಹಾಯ ಮಾಡುವುದಿಲ್ಲ ಎಂಬುದು ಖಚಿತ ಅನಿಸಿತು. ಇತ್ತೀಚೆಗೆ ಮ್ಯಾನ್ಮಾರ್‌ನಿಂದ ಬಂದಿದ್ದ ವಿಪಶ್ಯನ ಸಾಧಕರ ಪರಿಸ್ಥಿತಿಯೂ ಬಹಳ ಕೆಟ್ಟದಾಗಿತ್ತು.

ನನ್ನ ತಾಯಿ ಅವರದೇ ಆದ ಸಂದಿಗ್ಧ ಸ್ಥಿತಿಯಲ್ಲಿದ್ದರು. ಅವರ ಉಪಯೋಗಕ್ಕಾಗಿ, ಅವರನ್ನು ಮಾನಸಿಕ ಯಾತನೆಯಿಂದ ಬಿಡುಗಡೆ ಗೊಳಿಸುವುದಕ್ಕಾಗಿ ವಿಪಶ್ಯನ ಶಿಬಿರವನ್ನು ಸಂಘಟಿಸಬೇಕಾಗಿತ್ತು. ಈ ನಿರ್ದಿಷ್ಟ ಉದ್ದೇಶಕ್ಕಾಗಿಯೇ ನಾನು ಭಾರತಕ್ಕೆ ಬಂದಿದ್ದು. ಈ ಉದ್ದೇಶಕ್ಕಾಗಿಯೇ ಬರ್ಮಾ ಸರ್ಕಾರವು ಪೂರ್ವನಿದರ್ಶನವಿಲ್ಲದಿದ್ದರೂ ನನಗೆ ಪಾಸ್‌ಪೋರ್ಟ್ ಕೊಟ್ಟಿದ್ದು. ನಾನು ಭಾರತಕ್ಕೆ ಬಂದ ಮೇಲೆ ನನ್ನ ತಾಯಿಯು ಆಗಾಗ ನನ್ನ ಜೊತೆ ಕುಳಿತು ಧ್ಯಾನಮಾಡುತ್ತಿದ್ದರು. ಈ ಅನುಭವವು, ಶಿಬಿರವನ್ನು ಆಯೋಜಿಸಿದರೆ ಅದರಲ್ಲಿ ಭಾಗವಹಿಸುವ ಕಾತುರತೆಯನ್ನು ಅವರಲ್ಲಿ ಉಂಟು ಮಾಡಿತು. ಮ್ಯಾನ್ಮಾರ್‌ನಿಂದ ಬಂದಿದ್ದ ತನ್ನ ಮಗನನ್ನು ನಿರಾಶೆಗೊಳಿಸುವುದು ಅವರಿಗೆ ಇಷ್ಟವಿರಲಿಲ್ಲ. ಆದರೆ ಭಾರತದಲ್ಲಿರುವ, 'ಆನಂದ ಮಾರ್ಗ'ವನ್ನು ಅನುಸರಿಸುತ್ತಿರುವ ಇತರ ಮಕ್ಕಳಲ್ಲಿ ಕೋಪ ಉಂಟು ಮಾಡಲೂ ಬಯಸಲಿಲ್ಲ. "ನಾನು ಶಿಬಿರದಲ್ಲಿ ಭಾಗವಹಿಸುವಂತೆ ನೀನೇ ನೋಡಿಕೊಳ್ಳಬೇಕು" ಎಂದು ಬಹಳ ವಿಷಾದದಿಂದ ಹೇಳುತ್ತಿದ್ದರು.

ವಾತಾವರಣವು ನಿರಾಶಾದಾಯಕವಾಗಿತ್ತು ಮತ್ತು ಅಡೆತಡೆಗಳಿಂದ ತುಂಬಿತ್ತು. ನಾನು ವಿಫಲನಾಗಿ ಮ್ಯಾನ್ಮಾರ್‌ಗೆ ಹಿಂದಿರುಗಬೇಕಾಗಬಹುದು

ಎಂದು ಯೋಚಿಸಿದೆ. ನಮ್ಮ ಆಚಾರ್ಯರ ವಿಶ್ವಾಸಪೂರ್ವಕ ಭವಿಷ್ಯವಾಣಿಯ ಹೊರತಾಗಿಯೂ ಹತಾಶೆಯ ಕಾರ್ಮೋಡದ ಕರಿನೆರಳು ಆವರಿಸಿತ್ತು; ಮತ್ತು ವಿಪಶ್ಯನದ ಘಂಟೆ ಮೊಳಗಿದೆ ಎಂದು ನಾನು ಆಲೋಚಿಸಿದರೂ, ಅದರ ಪುನರುಜ್ಜೀವನವನ್ನು ಬೇರೆಯ ಸಮರ್ಥನಾದ ವ್ಯಕ್ತಿಯು ಮಾಡಬೇಕಾಗಿರುವಂತೆ ತೋರಿತು.

ಕೆಲವು ವೇಳೆ, ಈ ನಿರಾಶಾದಾಯಕ ವಾತಾವರಣದಲ್ಲೂ, ಒಂದು ಆಶಾಕಿರಣವಿರುತ್ತಿತ್ತು. ನಾನು ಭಾರತಕ್ಕೆ ಆಗಮಿಸಿದಾಗ ಪ್ರಕೃತಿಯು ನನ್ನ ಭವಿಷ್ಯದ ಯಶಸ್ಸಿನ ಸೂಚನೆ ನೀಡಬಹುದು ಎಂದು ಸಯಾಜಿಯವರು ಹೇಳಿದ್ದರು. ಯಾಂಗಾನ್ (ರಂಗೂನ್) ನಿಂದ ನಾನು ವಿಮಾನದಲ್ಲಿ ಪ್ರಯಾಣಿಸಿದೆ. ನಾನು ಕಲ್ಕತ್ತಾದಲ್ಲಿ (ಕೋಲ್ಕತ್ತಾದಲ್ಲಿ) ವಿಮಾನದಿಂದ ಇಳಿದಾಗ ಲಘುಭೂಕಂಪನವಾಯಿತು. ಉತ್ತರ ಭಾರತದ ವಿಶಾಲ ಪ್ರದೇಶ ಇದರಿಂದ ಹಾನಿಗೊಳಗಾಗಿತ್ತು ಎಂಬುದನ್ನು ಮಾರನೆಯ ದಿನ ವೃತ್ತ ಪತ್ರಿಕೆಗಳಲ್ಲಿ ಓದಿದೆ. ನನಗೆ ಬಹಳ ಕಾಲ ಕಣ್ಮರೆಯಾಗಿದ್ದ ಧರ್ಮ ರತ್ನವನ್ನು  ಮರಳಿ ಪಡೆಯಲು ಈ ನಾಡು ರೋಮಾಂಚನಗೊಂಡಿತೇನೋ ಎನಿಸಿತು.

ಈ ರೀತಿಯ ಸೂಚನೆಗಳು ಬುದ್ಧರ ಸಮಯದಲ್ಲೂ ಬಂದಿದ್ದವು. ವಿಪಶ್ಯನ ಧ್ಯಾನವು ಮರುಳುವುದರ ಮೂಲಕ ಬುದ್ಧರ ಬೋಧನೆಯು ಪುನರ್ಜನ್ಮ ಪಡೆದಿದ್ದಕ್ಕೆ ಪ್ರಕೃತಿಯು ಪ್ರಕಟಿಸಿದ ಆನಂದವೇ ಇದು? ಆದರೂ, ಪ್ರಸ್ತುತದ ಕಷ್ಟಗಳನ್ನು ನೆನಪಿಸಿಕೊಂಡಾಗ, ಭೂಕಂಪನವು ಬಹುಶಃ  ಕಾಕತಾಳೀಯ, ಇದಕ್ಕೆ ಪ್ರಾಮುಖ್ಯತೆ ಕೊಡುವುದು ಮುಠ್ಠಾಳತನ ಎಂದು ನನಗನ್ನಿಸಿತು. ಪ್ರಸ್ತುತದ ನಿರಾಶಾದಾಯಕ ಸ್ಥಿತಿಯನ್ನು ನಾನು ಅರ್ಥ ಮಾಡಿಕೊಂಡು ಸ್ವೀಕರಿಸುವ ಅಗತ್ಯವಿತ್ತು.

ಇಂತಹ ಭರವಸೆ ಮತ್ತು ನಿರಾಶೆಯ ಬಿರುಗಾಳಿಗಳು ನನ್ನ ಮನಸ್ಸಿನಲ್ಲಿ ಉಲ್ಬಣವಾಗುತ್ತಿದ್ದವು. ದಿನಗಳು ಕಳೆದಂತೆ ನಿರಾಶೆಯ ಭಾವನೆ ಹೆಚ್ಚಾಯಿತು ಮತ್ತು ನನ್ನನ್ನು ಆಳವಾಗಿ ತಟ್ಟಿತು. ಒಂದು ಸಂಜೆ ಈ ಮನಸ್ಥಿತಿಯಲ್ಲಿ ಧ್ಯಾನ ಮಾಡಲು ಕುಳಿತೆ. ಧ್ಯಾನವು ಬಹಳ ಶಕ್ತಿಯುತವಾಗಿತ್ತು. ಧ್ಯಾನ ಮುಗಿಯುವ ಸ್ವಲ್ಪ ಹೊತ್ತಿನ ಮೊದಲು, ನನ್ನೊಳಗೆ ದಟ್ಟವಾದ ಮೋಡ ಕವಿದು ಎಲ್ಲಾ ದಿಕ್ಕುಗಳಲ್ಲೂ ಸಂಪೂರ್ಣ ಕತ್ತಲೆ ಆವರಿಸಿದಂತಾಯಿತು. ಸುತ್ತಲಿನ ವಾತಾವರಣವು ಆತಂಕ ಮತ್ತು ಒತ್ತಡದಿಂದ  ತುಂಬಿತ್ತು. ಆದರೆ ನಾನು ನನ್ನ ಮನಸ್ಥಿತಿಯನ್ನು ಪರೀಕ್ಷಿಸಿದಾಗ, ಅದು ಪ್ರಭಾವಕ್ಕೊಳಗಾಗಿಲ್ಲದಿರುವುದನ್ನು ಕಂಡೆ. ಸಮತೆಯು ಗಟ್ಟಿಯಾಗಿ ನೆಲೆಗೊಂಡಿತ್ತು. ತಕ್ಷಣ ನನ್ನ ಮನಸ್ಸಿನಲ್ಲಿ "ಏನಾಗುತ್ತೋ ಆಗುತ್ತೆ. ನನ್ನನ್ನು ನಾನು ಧಮ್ಮಕ್ಕೆ ಸಮರ್ಪಿಸಿ ಕೊಂಡಿದ್ದೇನೆ. ಧಮ್ಮ ತನಗಿಷ್ಟ ಬಂದಂತೆ ಮಾಡಲಿ. ನಾನು ಯೋಗ್ಯವಾದ ಧಮ್ಮ ವಾಹಕವಾಗಿದ್ದರೆ ಮತ್ತು ಹಿಂದಿನ ಸಾಕಷ್ಟು ಪಾರಮಿತಗಳನ್ನು ಹೊಂದಿದ್ದರೆ, ಕತ್ತಲೆಯು ಕರಗಿ ಹೋಗುತ್ತದೆ. ಕತ್ತಲೆಯು ಕರಗದಿದ್ದರೆ ನನ್ನ ಅಸಮರ್ಥತೆಯನ್ನು ಒಪ್ಪಿಕೊಂಡು, ನನ್ನ ಕುಟುಂಬದವರನ್ನು ಮತ್ತು ಸ್ನೇಹಿತರನ್ನು ಭೇಟಿ ಮಾಡಿ ಮ್ಯಾನ್ಮಾರ್‌ಗೆ ಹಿಂದಿರುಗುತ್ತೇನೆ ಎಂಬ ದೃಢ ನಿರ್ಧಾರ ಮೂಡಿತು.

ನಾನು ಈ ನಿರ್ಧಾರ ಮಾಡಿದ ಕೂಡಲೆ, ಆನಂದ ಮಾರ್ಗದಲ್ಲಿ ಆಳವಾಗಿ ತೊಡಗಿಸಿಕೊಂಡಿದ್ದ ನನ್ನ ಸಹೋದರರ ಬಗ್ಗೆ ನನ್ನಲ್ಲಿ ಬಲವಾದ ಮೈತ್ರಿ ಉಂಟಾಯಿತು. "ಅವರು ಸಂತೋಷವಾಗಿರಲಿ, ಅವರು ಯಶಸ್ವಿಗಳಾಗಲಿ" ಎಂಬ ಭಾವನೆಯಿಂದ ನನ್ನ ಮನಸ್ಸು ತುಂಬಿತು. ತಕ್ಷಣ ಕತ್ತಲೆಯು ಕರಗಲು ಪ್ರಾರಂಭಿಸಿತು ಮತ್ತು ಕೆಲವೇ ಸೆಕೆಂಡುಗಳಲ್ಲಿ ಸಂಪೂರ್ಣ ಕರಗಿ ಹೋಯಿತು. ಅದರ ಜಾಗದಲ್ಲಿ ಆನಂದದ ಧಾರೆ ಹರಿಯಿತು ಮತ್ತು ಉತ್ಸಾಹವು ತುಂಬಿ ಹರಿಯಿತು. ಎಲ್ಲೆಲ್ಲೂ ಕಿಂಚಿತ್ತೂ ಹತಾಶೆಯ ಭಾವವಿರಲಿಲ್ಲ.

ನನ್ನ ಧ್ಯಾನವು ಮುಗಿದ ಮೇಲೆ, ಒಬ್ಬ ಯುವಕ ನನಗಾಗಿ ಕಾಯುತ್ತಿರುವುದನ್ನು ಕಂಡೆ. ಆತನೇ ವಿಜಯ್ ಅದೂಕಿಯ, ದಯಾನಂದ ಅದೂಕಿಯ ಅವರ ಮಗ ಮತ್ತು ಮಂಗಲ್‌ಚಂದ ಅದೂಕಿಯ ಅವರ ಮೊಮ್ಮಗ. ಮಂಗಲ್‌ಚಂದ್‌ರವರು  ನನ್ನ ಕಿರಿ ಸಹೋದರನ ಮಾವ ಮತ್ತು ಮ್ಯಾನ್ಮಾರ್‌ನಲ್ಲಿ ಸಾಮಾಜಿಕ ಸೇವೆಯಲ್ಲಿ ನನ್ನ ಸಹಚರರಾಗಿದ್ದರು. ಅವರೂ ಅಲ್ಲಿ ವಿಪಶ್ಯನ ಧ್ಯಾನವನ್ನು ಕಲಿತಿದ್ದರು. "ನೀವು ಹತ್ತು ದಿನದ ಶಿಬಿರ ಮಾಡುವುದಾದರೆ, ನಾನು ಒಂದು ಸ್ಥಳವನ್ನು ವ್ಯವಸ್ಥೆ ಮಾಡುತ್ತೇನೆ. ಪಂಚಾಯಿತಿವಾಡಿ ಧರ್ಮಶಾಲೆಯ ಒಂದು ಭಾಗವನ್ನು ಕೊಡಬಹುದು. ನಾನು ಈಗಾಗಲೇ ನಿರ್ವಾಹಕರ ಜೊತೆ ಮಾತಾಡಿದ್ದೇನೆ. ನೀವು ಬಂದು ನೋಡಬಹುದು" ಎಂದು ವಿಜಯ್ ಹೇಳಿದ.

ನಾನು ಹರ್ಷಚಿತ್ತದಿಂದ ಶಿಬಿರ ನಡೆಯಬೇಕಾದ ಸ್ಥಳಕ್ಕೆ ಹೋದೆ. ಆದರೆ ಅದು ಧ್ಯಾನಕ್ಕೆ ಸಂಪೂರ್ಣವಾಗಿ ತಕ್ಕುದಾಗಿರಲಿಲ್ಲ. ನಗರದ ಸದ್ದುಗದ್ದಲದ ಜೊತೆಗೆ ಎಲ್ಲಾ ಕಡೆ ಅದು ಕೊಳೆಯಿಂದ ತುಂಬಿತ್ತು. ಆದರೂ, ಸಾಂದ್ರ ಜನಸಂಖ್ಯೆಯಿರುವ ಮುಂಬಯಿಯಂತಹ ನಗರದಲ್ಲಿ  ಹತ್ತು ದಿನಗಳಿಗೆ ಸ್ಥಳ ಸಿಗುವುದು ಅಸಾಧ್ಯವಾಗಿತ್ತು. ಆದ್ದರಿಂದ ನಿರ್ವಾಹಕರಿಗೆ ನನ್ನ ಕೃತಜ್ಞತೆಗಳನ್ನು ತಿಳಿಸಿ ತಕ್ಷಣವೇ ನನ್ನ ಒಪ್ಪಿಗೆಯನ್ನು ಕೊಟ್ಟೆ.

ಈಗ ಯಾರು ಶಿಬಿರ ಸೇರುತ್ತಾರೆ ಎಂಬ ಪ್ರಶ್ನೆ ಹುಟ್ಟಿತು. ಆದರೆ ಶಿಬಿರ ನಡೆಸಲು ಜಾಗ ಸಿಕ್ಕಂತೆಯೇ, ಕೆಲವರಾದರೂ ಭಾಗವಹಿಸಲು ತಯಾರಾಗಬಹುದು ಎಂಬ ವಿಶ್ವಾಸ ಮೂಡಿತು.

"ನಾನೂ ಶಿಬಿರಾರ್ಥಿಯಾಗುತ್ತೇನೆ. ಶಿಬಿರ ಆಯೋಜನೆಯ ಜವಾಬ್ದಾರಿಯನ್ನು ನಾನು ವಹಿಸಿಕೊಳ್ಳಬೇಕೆಂದಿದ್ದೆ. ಆದರೆ ಅದನ್ನು ನನ್ನ ತಂದೆ ಮಾಡುತ್ತಾರೆ ನಾನು ಶಿಬಿರ ಸೇರುತ್ತೇನೆ" ಎಂದು ಬಹಳ ಉತ್ಸಾಹದಿಂದ ವಿಜಯ್ ಹೇಳಿದ.

ಮ್ಯಾನ್ಮಾರ್‌ನಿಂದ ಬಂದಿದ್ದ ನನ್ನ ಹಳೆಯ ಸ್ನೇಹಿತ ಮತ್ತು ಸಹಯೋಗಿ, ಕಾಂತಿಭಾಯ್ ಜಿ. ಷಾ ಅವರು ನನ್ನನ್ನು ನೋಡಲು ನನ್ನ ಮನೆಗೆ ಬಂದಿದ್ದರು. ಶಿಬಿರದ ಬಗ್ಗೆ ಕೇಳಿದಾಗ, "ನಾನೂ ಒಬ್ಬ ವಿದ್ಯಾರ್ಥಿಯಾಗುತ್ತೇನೆ ಮತ್ತು ನಮ್ಮ ಸ್ನೇಹಿತ ಬಿ.ಸಿ. ಷಾ ಮತ್ತೊಬ್ಬ ವಿದ್ಯಾರ್ಥಿಯಾಗುತ್ತಾರೆ. ಅವರನ್ನೂ ನಾನು ಕರೆತರುತ್ತೇನೆ" ಎಂದು ಬಹಳ ಉತ್ಸಾಹದಿಂದ ಹೇಳಿದರು.

"ಕೇವಲ ಇಬ್ಬರು ಅಥವಾ ಮೂವರು ಭಾಗವಹಿಸಿದರೂ, ಈಗ ಖಂಡಿತವಾಗಿ ಶಿಬಿರ ನಡೆಯುತ್ತದೆ" ಎಂದು ಅಂದುಕೊಂಡೆ.

ನನ್ನ ತಾಯಿ ಹತ್ತಿರದಲ್ಲೇ ಕುಳಿತಿದ್ದರು. ಯಾವಾಗಲೂ ಉಲ್ಲಾಸದಿಂದ ತುಂಬಿರುತ್ತಿದ್ದ ಅವರ ಮುಖ ಖಿನ್ನವಾದಂತೆ ಕಂಡಿತು. ಅವರ ದುಃಖದ ಅಲೆಗಳು ನನ್ನ ಮನಸ್ಸನ್ನು ಅಲ್ಲಾಡಿಸಿದವು. ರಾತ್ರಿ ಮಲಗಿದಾಗ ಅವರ ಚಿತ್ರಣವು ಪದೇಪದೇ ನನ್ನ ಕಣ್ಣ ಮುಂದೆ ಬಂದಿತು. ಅವರ ಮನಸ್ಥಿತಿಯನ್ನು ನಾನು ಬಹಳ ಚೆನ್ನಾಗಿ ಅರ್ಥಮಾಡಿಕೊಂಡೆ. ಒಂದು ಕಡೆ, ಅವರಿಗಾಗಿ ವಿಪಶ್ಯನ ಶಿಬಿರ ನಡೆಸಲು ಬಹಳ ದೂರದಿಂದ ಒಬ್ಬ ಮಗ ಬಂದಿದ್ದಾನೆ. ಮತ್ತೊಂದು ಕಡೆ, ಅವರು ಶಿಬಿರದಲ್ಲಿ ಭಾಗವಹಿಸಿದರೆ ಅವರ ಚಿಕ್ಕ ಮಗ ಬೇಸರಪಟ್ಟುಕೊಳ್ಳಬಹುದು ಎಂಬ ಎರಡು ವಿಭಿನ್ನ ಭಾವನೆಗಳಲ್ಲಿ ಅವರು ಛಿದ್ರವಾಗಿದ್ದರು.

ನಾನೂ ವಿಷಾದದಿಂದ ತುಂಬಿದ್ದೆ. ಒಂದು ಕಾರಣವೆಂದರೆ, ಬಹಳ ಹಿಂದೆ ನುಡಿದಿದ್ದ ಭವಿಷ್ಯವಾಣಿಯು ನಿಜವಾಗುತ್ತಿತ್ತು. ಬಹುಶಃ 2000 ವರ್ಷಗಳ ನಂತರ ಭಾರತದಲ್ಲಿ ವಿಪಶ್ಯನ ಶಿಬಿರವು ನಡೆಯುವುದರಲ್ಲಿತ್ತು. ಈ ಚಾರಿತ್ರಿಕ ಧರ್ಮ ಪ್ರಚಾರದಲ್ಲಿ ಭಾಗವಹಿಸಿ ಮತ್ತು ಶಿಬಿರ ಆಯೋಜನೆಯಲ್ಲಿ ಸಹಾಯ ಮಾಡಿ ನನ್ನ ಇಡೀ ಕುಟುಂಬವು ಪುಣ್ಯಗೊಳಿಸಿಕೊಳ್ಳುತ್ತದೆ ಎಂದು ನಾನು ನಿರೀಕ್ಷಿಸಿದ್ದೆ. ಈಗ ಇದು ನಡೆಯುವ ಸಾಧ್ಯತೆ ಕಿಂಚಿತ್ತೂ ಇಲ್ಲದಿರುವಂತೆ ತೋರಿತು.

ನನ್ನ ದುಃಖಕ್ಕೆ ಇನ್ನೊಂದು ಕಾರಣವೆಂದರೆ, ನಾನು ನನ್ನ ತಂದೆ–ತಾಯಿಗಳ ಋಣ ತೀರಿಸಬಯಸಿದ್ದೆ. ಅವರ ಮುಪ್ಪಿನ ಕಾಲದಲ್ಲಿ ಅವರನ್ನು ಧರ್ಮ ಮಾರ್ಗದಲ್ಲಿಡುವ ಪ್ರಯತ್ನ ಮಾಡಿದ್ದೆ. ಆದರೆ ಅವರು ಶಿಬಿರ ಸೇರುವ ಯಾವುದೇ ಸಾಧ್ಯತೆ ನನಗೆ ಕಾಣಲಿಲ್ಲ. ನಾನು ಏನು ಮಾಡಲು ಸಾಧ್ಯ? ನಾನು ಮೈತ್ರಿಯ ಬಲವನ್ನು ಮಾತ್ರ ಅವಲಂಬಿಸಬೇಕಾಗಿತ್ತು. ಆ ರಾತ್ರಿ ನಾನು ನನ್ನ ಹೆತ್ತವರಿಗೆ ಮತ್ತು ಸಹೋದರರಿಗೆ ಬಲವಾದ ಮೈತ್ರಿಯನ್ನು ಕಳುಹಿಸಿದೆ. ಮಾರನೇ ದಿನ ಇಡೀ ವಾತಾವರಣವೇ ಉತ್ಸಾಹದಿಂದ ಕಂಪಿಸುತ್ತಿದೆ ಎನಿಸಿತು. ಮ್ಯಾನ್ಮಾರ್‌ನಿಂದ ಬಂದಿದ್ದ ಮತ್ತೊಬ್ಬ ಸ್ನೇಹಿತ, ಮೋತಿಲಾಲ್ ಚೌಧರಿ ಮತ್ತು ಬಾಲ್‌ಚಂದ್ ಪೋದ್ದಾರ್ ಅವರ ಮಗ ಭರತ್ ನನ್ನನ್ನು ಕಾಣಲು ಬೆಳಬೆಳಿಗ್ಗೆಯೇ ಬಂದಿದ್ದರು. ಇಬ್ಬರೂ ವಿಪಶ್ಯನದ ಹಳೆಯ ವಿದ್ಯಾರ್ಥಿಗಳು. ಶಿಬಿರದ ಬಗ್ಗೆ ತಿಳಿದಾಗ ಅವರಿಬ್ಬರೂ ಶಿಬಿರ ಸೇರುವುದಾಗಿ ಹೇಳಿದ್ದಲ್ಲದೆ, ಇತರರನ್ನೂ ಶಿಬಿರ ಸೇರಲು ಪ್ರೋತ್ಸಾಹಿಸುವುದಾಗಿ ನನಗೆ ಆಶ್ವಾಸನೆ ಕೊಟ್ಟರು. ಮದ್ರಾಸ್ (ಈಗಿನ ಚೆನ್ನೈ)ನಲ್ಲಿದ್ದ ನನ್ನ ಕುಟುಂಬ ಸದಸ್ಯರಿಗೆ ಫೋನ್ ಮಾಡಿದೆ. ಅಲ್ಲಿ ನೆಲೆಸಿದ್ದ ಕುಟುಂಬ ಸದಸ್ಯರು ಮುಂಬರುವ ಶಿಬಿರದ ಬಗ್ಗೆ ತಿಳಿದು ಸಂತೋಷಪಟ್ಟರು ಮತ್ತು ಮೂವರು ಶಿಬಿರದಲ್ಲಿ ಭಾಗವಹಿಸಲು ಮುಂಬಯಿಗೆ ಬರಲು ನಿರ್ಧರಿಸಿದರು.

ನನ್ನ ತಂದೆ ಮತ್ತು ತಾಯಿ ಇದನ್ನೆಲ್ಲ ಗಮನಿಸುತ್ತಿದ್ದರು. ನನ್ನ ತಾಯಿಯ ಕಷ್ಟಗಳನ್ನು ನಾನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೆ. ಆದರೆ ಈ ಪರಿಸ್ಥಿತಿಯಲ್ಲಿ ಅವರಿಗೆ ಏನನ್ನೂ ಹೇಳುವ ಧೈರ್ಯ ನನಗಿರಲಿಲ್ಲ. ನನ್ನ ತಂದೆಯ ಹಠಮಾರಿತನ ನನಗೆ ಚೆನ್ನಾಗಿ ಗೊತ್ತಿತ್ತು. ಆನಂದ ಮಾರ್ಗ ದಿಂದ ಹೆಚ್ಚು ಪ್ರಭಾವಿತರಾಗದಿದ್ದರೂ ಅವರು ಆನಂದ ಮಾರ್ಗವನ್ನು ಸೇರಿದ್ದರು. ಮ್ಯಾನ್ಮಾರ್‌ನಲ್ಲಿರುವಾಗ ಸಯಾಜಿ ಉ ಬಾ ಖಿನ್ ಅವರ ಬಳಿ ಒಂದು ವಿಪಶ್ಯನ ಶಿಬಿರ ಪೂರೈಸಿದ್ದರು. ಆ ಶಿಬಿರದಲ್ಲಿ  ಅವರ  ಆನಾಪಾನ ಬಹಳ ಶಕ್ತಿಯುತವಾಗಿತ್ತು. ಅವರ ಧ್ಯಾನದ ಬಗ್ಗೆ ಸಯಾಜಿಯವರಿಗೆ ತೃಪ್ತಿಯಿತ್ತು.

ಶಿಬಿರದಲ್ಲಿ ಭಾಗವಹಿಸುವುದಕ್ಕೆ ಅವರಿಗಿದ್ದ ಒಂದೇ ಅಡ್ಡಿಯೆಂದರೆ, ಅವರು ತಮ್ಮ ಧಾರ್ಮಿಕ ನಿತ್ಯಾಚರಣೆಗಳನ್ನು ನಿಲ್ಲಿಸಲು ಇಚ್ಛಿಸುತ್ತಿರಲಿಲ್ಲ. ಮ್ಯಾನ್ಮಾರ್‌ನಲ್ಲಿ ನೀವು ಶಿಬಿರದಲ್ಲಿ ಭಾಗವಹಿಸಿದಾಗ ನಿಮ್ಮ ಪರವಾಗಿ ಬೇರೊಬ್ಬರು ನಿತ್ಯಾಚರಣೆಗಳನ್ನು ಮಾಡುತ್ತಿದ್ದರು. ಅಂತಹದೇ ವ್ಯವಸ್ಥೆಯನ್ನು ಇಲ್ಲಿಯೂ ಮಾಡಬಹುದು ಎಂದು ನಾನು ಸಲಹೆ ಕೊಟ್ಟೆ. ಸಂತೋಷದಾಯಕ ಆಶ್ಚರ್ಯ ವೆಂದರೆ, ಅವರು ನನ್ನ ಸಲಹೆಯನ್ನು ಒಮ್ಮೆಲೇ ಒಪ್ಪಿಕೊಂಡರು. ಇದನ್ನು ಕೇಳಿದ ನನ್ನ ತಾಯಿಯು ಧೈರ್ಯ ಮಾಡಿ "ನೀವು ಧ್ಯಾನ ಮಾಡುವುದಾದರೆ ನಾನೂ ಧ್ಯಾನ ಮಾಡುತ್ತೇನೆ, ಹತ್ತು ದಿನಗಳು ಅಲ್ಲದಿದ್ದರೂ ಕನಿಷ್ಠ ಐದು ದಿನಗಳಾದರೂ" ಎಂದು ಹೇಳಿದರು.

ನನ್ನ ಸಂತೋಷಕ್ಕೆ ಎಲ್ಲೆಯೇ ಇರಲಿಲ್ಲ. ನನ್ನ ತಂದೆ–ತಾಯಿಗಳ ಋಣ ತೀರಿಸುವ ಅವಕಾಶ ಇದಾಗಿತ್ತು. "ಯಾರಿಗೆ ಗೊತ್ತು, ಆನಂದ ಮಾರ್ಗದ ಅನುಯಾಯಿಗಳಾಗಿದ್ದ ಉಳಿದ ಕುಟುಂಬ ಸದಸ್ಯರೂ ಮುಂದೊಂದುದಿನ ವಿಪಶ್ಯನದ ಲಾಭ ಪಡೆಯಬಹುದು; ಆದರೆ ಇವರಿಬ್ಬರೂ ಇಳಿವಯಸ್ಸಿನವರು, ಇವರು ಈಗ ಶಿಬಿರ ಸೇರಬೇಕು" ಎಂದು ನಾನು ಯೋಚಿಸಿದೆ. ಹನ್ನೆರಡು ಜನ ಇತರೆ ವಿದ್ಯಾರ್ಥಿಗಳೊಡನೆ ನನ್ನ ತಂದೆ–ತಾಯಿ ಮೊದಲ ವಿಪಶ್ಯನ ಶಿಬಿರದಲ್ಲಿ ಪಾಲ್ಗೊಂಡರು. ನನ್ನ ತಾಯಿಯು ಪೂರ್ತಿ ಹತ್ತು ದಿನಗಳೂ ಶಿಬಿರದಲ್ಲಿದ್ದು ಅಪಾರ ಪ್ರಯೋಜನ ಪಡೆದರು.

ಆನಂದ ಮಾರ್ಗದಲ್ಲಿದ್ದ ನನ್ನ ಸಹೋದರರು ಈ ಮೊದಲ ಶಿಬಿರಕ್ಕೆ ಸಹಾಯ ಮಾಡದಿದ್ದರೂ, ಈ ಪುಣ್ಯ ಕೆಲಸಕ್ಕೆ ಯಾವುದೇ ಅಡ್ಡಿಯುಂಟು ಮಾಡಲಿಲ್ಲ. ವಿರೋಧವನ್ನೂ ಮಾಡಲಿಲ್ಲ, ಬೇಸರಿಸಿಕೊಳ್ಳಲೂ ಇಲ್ಲ. ಇದು ನನಗೆ ಆಶ್ಚರ್ಯ ಉಂಟುಮಾಡಿತು. ನಮ್ಮ ಎಲ್ಲಾ ಆತಂಕಗಳೂ ನಿರಾಧಾರವಾಗಿದ್ದವು. ನನ್ನ ಮನಸ್ಸು ಅವರ ಬಗೆಗೆ ಅಪರಿಮಿತವಾದ ಕೃತಜ್ಞತೆಯಿಂದ ತುಂಬಿತು. ಶಿಬಿರದ ಕೊನೆಯಲ್ಲಿ, ಈ ಅದ್ಭುತವಾದ ಧರ್ಮದ ಕೆಲಸದ ಪುಣ್ಯವನ್ನು ಮಾನಸಿಕವಾಗಿ ಅವರ ಜೊತೆ ಹಂಚಿಕೊಂಡೆ ಮತ್ತು ಆದಷ್ಟು ಬೇಗ ಅವರ ಪುಣ್ಯವೂ ಫಲ ನೀಡಲಿ, ಅವರೂ ವಿಪಶ್ಯನದ ಅಮೃತವನ್ನು ಸವಿದು ಸಂತೋಷವಾಗಿರಲಿ ಎಂದು ಹಾರೈಸಿದೆ.

ಮೊದಲನೇ ಶಿಬಿರಕ್ಕೆ ಮಾತ್ರ ಈ ಕಷ್ಟಗಳು ಬಂದವು. ಇದಾದ ತಕ್ಷಣ ಈ ಶಿಬಿರದಲ್ಲಿ ಪ್ರಯೋಜನ ಪಡೆದ ವಿದ್ಯಾರ್ಥಿಗಳು ಒಂದಾದ ಮೇಲೆ ಒಂದರಂತೆ ಶಿಬಿರವನ್ನು ಸಂಘಟಿಸಲು ಮತ್ತು ಶಿಬಿರದಲ್ಲಿ ಸೇವೆ ಮಾಡಲು ಪ್ರಾರಂಭಿಸಿದರು. ಹೀಗೆ 2,000 ವರ್ಷಗಳ ನಂತರ ಪರಿಶುದ್ಧ ಧರ್ಮದ ಧಾರೆಯು ಪುನಃ ಭಾರತದಲ್ಲಿ ಹರಿಯಲು ಪ್ರಾರಂಭಿಸಿತು. 1969 ರಿಂದ ಅದು ದೊಡ್ಡ ನದಿಯಾಗಿ ಭಾರತದ ಮತ್ತು ವಿಶ್ವದ ಜನರಿಗೆ ಸಂತೋಷವನ್ನು ತಂದಿದೆ. ಅನೇಕರಿಗೆ ಮುಕ್ತಿಯ ದ್ವಾರಗಳು ತೆರೆದಿವೆ; ಅವರು ನಿಜವಾದ ಸಂತೋಷವನ್ನು ಮನಗಾಣಲು ಅನುವು ಮಾಡಿಕೊಟ್ಟಿದೆ.

ವಿಪಶ್ಯನದ ಧರ್ಮಗಂಗೆಯು ಹೆಚ್ಚು ಹೆಚ್ಚು ಶಕ್ತಿ ಪಡೆದುಕೊಳ್ಳಲಿ, ಜಗತ್ತಿನಾದ್ಯಂತ ಜನರಿಗೆ ಪ್ರಯೋಜನ ನೀಡಲಿ.

*******

## ಗೋಯಂಕಾಜಿಯವರೊಡನೆ ಪ್ರಶ್ನೋತ್ತರಗಳು ('ಫಾರ್ ದ ಬೆನಿಫಿಟ್ ಆಫ್ ಮೆನಿ' ಇಂಗ್ಲಿಷ್ ಪುಸ್ತಕದಿಂದ ಅನುವಾದಿಸಿದ್ದು)

**ಪ್ರಶ್ನೆ:** ವಿಪಶ್ಯನವು ಮಾನವ ಜನಾಂಗಕ್ಕೆ ಪ್ರಯೋಜನ ನೀಡುವುದು ಮುಂದುವರಿಯಲು ಸಹಾಯಕ ಆಚಾರ್ಯರು ಮತ್ತು ವಿದ್ಯಾರ್ಥಿಗಳ ಪಾತ್ರವನ್ನು ದಯವಿಟ್ಟು ವಿವರಿಸುತ್ತೀರಾ?

**ಗೋಯಂಕಾಜಿ :** ಸಹಾಯಕ ಆಚಾರ್ಯರು ಮತ್ತು ವಿದ್ಯಾರ್ಥಿಗಳ ಮಧ್ಯದ ಸಂಬಂಧದ ಬಗ್ಗೆ ನೀವು ಕೇಳುತ್ತಿದ್ದೀರಾ? ಧರ್ಮವನ್ನು ಸರಿಯಾಗಿ ಬೋಧಿಸುವುದು ಹೇಗೆ ಎಂಬುದನ್ನು ಕಲಿಯಲು ಸಹಾಯಕ ಆಚಾರ್ಯರುಗಳನ್ನು ನೇಮಿಸಲಾಗುತ್ತದೆ. ಅವರಿಗೆ ಇದೊಂದು ತರಬೇತಿಯ ಅವಧಿ. ಸರಿಯಾದ ರೀತಿಯಲ್ಲಿ ಧರ್ಮವನ್ನು ನೀಡುವುದರಲ್ಲಿ ಬೆಳೆದಂತೆ ಅವರಿಗೆ ಹೆಚ್ಚಿನ ಜವಾಬ್ದಾರಿ ನೀಡಲಾಗುತ್ತದೆ. ಅವರು ಹಿರಿಯ ಸಹಾಯಕ ಆಚಾರ್ಯರಾಗುತ್ತಾರೆ. ಈ ಪಾತ್ರವನ್ನು ಅವರು ಸರಿಯಾಗಿ ನಿರ್ವಹಿಸಿದರೆ, ಇನ್ನೂ ಹೆಚ್ಚಿನ ಜವಾಬ್ದಾರಿ ನೀಡಲಾಗುತ್ತದೆ. ಅವರು ಉಪ ಆಚಾರ್ಯರಾಗುತ್ತಾರೆ. ಇದರಲ್ಲಿ ಪರಿಪೂರ್ಣವಾಗಿ ಕೆಲಸ ಮಾಡುತ್ತಾ ಅವರು ಆಚಾರ್ಯರಾಗುತ್ತಾರೆ. ಆದ್ದರಿಂದ ಇದೆಲ್ಲವೂ ಒಂದು ತರಬೇತಿ.

ಧರ್ಮ ಪೀಠದ ಮೇಲೆ ಕುಳಿತ ಕೆಲವರು ಅಹಂ ಬೆಳೆಸಿಕೊಳ್ಳಲು ಪ್ರಾರಂಭಿಸಬಹುದು. "ನೋಡು, ಈಗ ನಾನು ಇಲ್ಲಿ ಬಂದಿರುವ ಧ್ಯಾನಾರ್ಥಿಗಳಿಗಿಂತ ಮೇಲ್ದರ್ಜೆಯವನು. ಹಾಗಾಗಿ ನಾನು ಧರ್ಮ ಪೀಠದ ಮೇಲೆ ಕುಳಿತಿದ್ದೇನೆ" ಎಂದು ಭಾವಿಸಬಹುದು. ಸಹಾಯಕ ಆಚಾರ್ಯರಿಂದ ಹಿರಿಯ ಸಹಾಯಕ ಆಚಾರ್ಯರಾದ ಕೆಲವರು, "ಈಗ ನಾನು ಈ ಸಹಾಯಕ ಆಚಾರ್ಯರುಗಳಿಗಿಂತ ಮೇಲಿನವನಾಗಿದ್ದೇನೆ" ಎಂದು ಭಾವಿಸಿಕೊಳ್ಳಬಹುದು ಅಥವಾ ಉಪ ಆಚಾರ್ಯರಾದ ಕೆಲವರು "ನೋಡು, ನಾನು ಬಹಳ ಮೇಲಿನವನು" ಎಂದು ಭಾವಿಸಿಕೊಳ್ಳಬಹುದು. ಅಥವಾ ಆಚಾರ್ಯರಾದ ಕೆಲವರು "ಓ, ನಾನು ಅತ್ಯಂತ ಎತ್ತರದವನು! ಪ್ರತಿಯೊಬ್ಬರೂ ನಾನು ಹೇಳಿದ್ದನು ಪಾಲಿಸಬೇಕು" ಎಂದು ಭಾವಿಸಿಕೊಳ್ಳಬಹುದು.

ಇಂತಹ ಹುಚ್ಚುತನ ಬೆಳೆದರೆ, ಆ ವ್ಯಕ್ತಿಯು ಧರ್ಮ ಬೋಧನೆ ಮಾಡಲು ಯೋಗ್ಯನಲ್ಲ. ಇಂತಹ ಬೆಳವಣಿಗೆ ಆಗದಿರಲೆಂಬುದೇ ಇಡೀ ತರಬೇತಿಯ ಉದ್ದೇಶ. ಒಬ್ಬ ವ್ಯಕ್ತಿಯು ಸಹಾಯಕ ಆಚಾರ್ಯರಾಗಿ ನೇಮಕವಾದ ಕೂಡಲೇ, ಅವರ ಕೆಲಸವೆಂದರೆ, ಬಹಳ ನಮ್ರತೆಯಿಂದ ಧರ್ಮವನ್ನು ಕೊಡುವುದು ಹೇಗೆ ಎಂಬುದನ್ನು ಕಲಿಯುವುದು.

"ನಾನು ಬುದ್ಧರ, ಧರ್ಮದ, ಧರ್ಮದ ಆಚಾರ್ಯರುಗಳ ಇಡೀ ಪರಂಪರೆಯ ಪ್ರತಿನಿಧಿ. ನಾನು ನನ್ನ ಆಚಾರ್ಯರ ಪ್ರತಿನಿಧಿ. ಇಡೀ ಸಂಪ್ರದಾಯಕ್ಕೆ ಅಥವಾ ಧರ್ಮಕ್ಕೆ ಕೆಟ್ಟ ಹೆಸರು ಬರುವಂಥದ್ದನ್ನು ನಾನು ಮಾಡಿದರೆ ಅದು ಪಾಪ ಗಳಿಸಿಕೊಳ್ಳುವ ಕೆಲಸ. ನಾನು ನನ್ನ ಪಾರಮಿಗಳನ್ನು ಬೆಳೆಸಿಕೊಳ್ಳಲು, ಬುದ್ಧರಿಗೆ, ಈ ಪರಂಪರೆಯ ಆಚಾರ್ಯರುಗಳಿಗೆ ಮತ್ತು ನನ್ನ ಸ್ವಂತ ಆಚಾರ್ಯರಿಗೆ ಕೃತಜ್ಞತೆ ಸಲ್ಲಿಸಿ ಋಣ ಮುಕ್ತನಾಗಬೇಕು. ಏಕೆಂದರೆ ನಾನು ಅವರಿಂದ ಈ ಅದ್ಭುತವಾದ ಧರ್ಮವನ್ನು ಪಡೆದಿದ್ದೇನೆ. ಈ ಕಾರಣಕ್ಕಾಗಿ ನಾನು ಸೇವೆ ಮಾಡುತ್ತಿದ್ದೇನೆ" ಎಂದು ಯೋಚಿಸಬೇಕು. ಆಚಾರ್ಯರಲ್ಲಿ ಈ ಭಾವನೆಯಿದ್ದರೆ, ಅವರ ಪ್ರತಿಯೊಂದು ಕ್ರಿಯೆಯೂ ಅದ್ಭುತವಾದ ಕ್ರಿಯೆಯಾಗುತ್ತದೆ. ಅವರ ಸೇವೆಯು ಸಹಾಯಕವಾಗುತ್ತದೆ.

ವಿದ್ಯಾರ್ಥಿಗಳೂ ಅವರಿಗೆ ಗೌರವ ಕೊಡುತ್ತಾರೆ. ಆದರೆ ಈ ವ್ಯಕ್ತಿಯು ನಾನು ಮೇಲ್ದರ್ಜೆಯವನು ಎಂದು ಅಧಿಕಾರ ಹೇರಲು ಪ್ರಾರಂಭಿಸಿದರೆ, ಇವರನ್ನು ಆಚಾರ್ಯರಾಗಿ ನೇಮಿಸಿದ್ದರೂ, ಇವರು ಯೋಗ್ಯರಲ್ಲ. ಈಗ ನಡೆಯುತ್ತಿರುವ ಎಲ್ಲಾ ತರಬೇತಿಯು ಫಲಿತಾಂಶ ದೊರೆಯುವವರೆಗೂ ಪದೇ ಪದೇ ಮಾಡುವ ಪ್ರಯತ್ನ. ಧರ್ಮದಲ್ಲಿ ಸೇವೆ ಮಾಡುವುದು ಹೇಗೆ ಎಂಬುದರ ಬಗ್ಗೆ ಜನರನ್ನು ತರಬೇತಿಗೊಳಿಸಲಾಗುತ್ತದೆ.

ಸಯಾಜಿ ಉ ಬಾ ಖಿನ್‌ರವರು ಹೇಳುತ್ತಿದ್ದರು: "ಬೋಧಿಸಲು ಯೋಗ್ಯನೆಂದು ನಾನು ನೇಮಿಸಿದ ವ್ಯಕ್ತಿಯು ಸಂಪೂರ್ಣವಾಗಿ ವಿಫಲನಾಗ ಬಹುದು." ಈ ವ್ಯಕ್ತಿಯು ಹೊಂದಿರುವ ಪಾರಮಿಗಳನ್ನು ಅವಲಂಬಿಸಿರುತ್ತದೆ. ಹಿಂದಿನಿಂದ ಒಳ್ಳೆಯ ಪಾರಮಿಗಳನ್ನು ಹೊಂದಿರುವ ವ್ಯಕ್ತಿಯು ಬೋಧನೆಯಲ್ಲಿ ಯಶಸ್ವಿಯಾಗುತ್ತಾನೆ. ಸಹಾಯಕ ಆಚಾರ್ಯರಿಂದ ಆಚಾರ್ಯರವರೆಗೆ ಹೋಗುತ್ತಾರೆ. ಏಕೆಂದರೆ ಆ ವ್ಯಕ್ತಿಯಲ್ಲಿ ಆ ಗುಣಗಳಿವೆ.

ಇಂತಹ ವ್ಯಕ್ತಿಯು ಈ ಮುಂದಿನಂತೆ ಯೋಚಿಸುತ್ತಾರೆ : "ಧರ್ಮವನ್ನು (ಧ್ಯಾನವನ್ನು) ಕಲಿಯಲು ಬರುವ ಜನರಿಗೆ ನಾನು ಕೃತಜ್ಞನಾಗಿದ್ದೇನೆ. ನನ್ನಿಂದ ಧರ್ಮವನ್ನು ಕಲಿಯಲು ಎಷ್ಟೊಂದು ಜನರು ಬರುತ್ತಿದ್ದಾರೆ. ಈಗ ನಾನು ದಾನ ಪಾರಮಿ ಯನ್ನು ಗಳಿಸಿಕೊಳ್ಳುತ್ತಿದ್ದೇನೆ. ಧರ್ಮವನ್ನು ಕೊಡುವ ದಾನಪಾರಮಿಯು ಅತ್ಯುನ್ನತ ದಾನ ಪಾರಮಿ. ಈ ಜನರು ಬರದಿದ್ದರೆ ನಾನು ಈ ಪಾರಮಿಯನ್ನು ಬೆಳೆಸಿಕೊಳ್ಳುವುದು ಹೇಗೆ? ನಾನು ಕಾಡಿಗೆ ಹೋಗಿ 'ಇಲ್ಲಿರುವ ಎಲ್ಲರಿಗೂ ನಾನು ಬೋಧಿಸುತ್ತೇನೆ" ಎಂದು ಹೇಳಲು ಸಾಧ್ಯವಿಲ್ಲ. ನಾನು ನನ್ನ ದಾನ ಪಾರಮಿಯನ್ನು ಬೆಳೆಸಿಕೊಳ್ಳುತ್ತಿದ್ದೇನೆ. ಏಕೆಂದರೆ ಇಲ್ಲಿ ಬರುವ ಜನರು ನನಗೆ ಆ ಅವಕಾಶವನ್ನು ಕೊಡುತ್ತಿದ್ದಾರೆ. ನಾನು ಅವರಿಗೆ ಕೃತಜ್ಞನಾಗಿದ್ದೇನೆ.

"ಮತ್ತು ಬುದ್ಧರಿಂದ ಮೊದಲ್ಗೊಂಡು ಎಲ್ಲಾ ಆಚಾರ್ಯರುಗಳು ಪ್ರೀತಿ ಮತ್ತು ಕರುಣೆಯಿಂದ ಬೋಧಿಸುತ್ತಿದ್ದಾರೆ! ನಾನು ಇನ್ನೂ ಕಲಿಯುತ್ತಿದ್ದೇನೆ. ಆದರೆ ಇದು ನನಗೆ ಮಾದರಿಯಾಗಬೇಕು, ಇದು ನನ್ನ ಗುರಿಯಾಗಬೇಕು. ಈ ರೀತಿಯಾಗಿಯೇ ನಾನು ಕೆಲಸ ಮಾಡಬೇಕು."

ಉನ್ನತ ಜವಾಬ್ದಾರಿ ವಹಿಸಿರುವ ಯಾವುದೇ ವ್ಯಕ್ತಿಯು, "ಪ್ರಾರಂಭದಿಂದಲೇ ಧರ್ಮ ಸೇವೆಯೇ ನನ್ನ ಕೆಲಸ. ಧರ್ಮ ಸೇವಕನಾಗಲಿ ಅಥವಾ ಸಹಾಯಕ ಆಚಾರ್ಯನಾಗಲಿ, ನಾನು ಧರ್ಮ ಸೇವೆ ಮಾಡುತ್ತಿದ್ದೇವೆ. ಈಗ ನಾನು ಹೆಚ್ಚು ಧರ್ಮ ಸೇವೆ ಮಾಡಲು ಅವಕಾಶ ಪಡೆದಿದ್ದೇನೆ" ಎಂದು ಭಾವಿಸಬೇಕು.

ಧರ್ಮದಲ್ಲಿ ಅಧಿಕಾರ ಎಂಬುದಿಲ್ಲ. ವಿನಮ್ರ ಸೇವೆ ಮಾತ್ರ ಇದೆ. ವಿದ್ಯಾರ್ಥಿಗಳ ಜೊತೆ ಒಳ್ಳೆಯ ಸಂಬಂಧವಿರಿಸಿಕೊಳ್ಳಲು ಇರುವುದು ಇದೊಂದೇ ಮಾರ್ಗ. ಪ್ರತಿಯೊಬ್ಬ ಆಚಾರ್ಯರೂ–ಸಹಾಯಕ ಅಥವಾ ಹಿರಿಯ ಅಥವಾ ಉಪ ಅಥವಾ ಪೂರ್ಣ ಆಚಾರ್ಯ– ತಮ್ಮ ಇಷ್ಟಗಳನ್ನು ವಿದ್ಯಾರ್ಥಿಗಳ ಮೇಲೆ ಹೇರಿದರೆ ಏನಾಗುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

**RNI. No. : KARKAN/2015/68727. Postal Regn. No.: RNP/KA/BGS/2253/2023-25**
**Published On 10th & Posted On 20th March. 2023. Posted At : Bengaluru PSO, B'luru 26. Price(Annual)Rs.30.**

"ನಾಳೆಯಿಂದ ಈ ವ್ಯಕ್ತಿಯು ಸಹಾಯಕ ಆಚಾರ್ಯ. ನೀವು ಅವರ ಆದೇಶಗಳನ್ನು ಪಾಲಿಸಬೇಕು, ಅವರ ಬಯಕೆಗಳನ್ನು ಈಡೇರಿಸಬೇಕು.... ಈಗ ಇಂತಹವರು ಹಿರಿಯ ಸಹಾಯಕ ಆಚಾರ್ಯರು ಎಲ್ಲಾ ಸಹಾಯಕ ಆಚಾರ್ಯರೂ ಅವರ ಮಾತುಗಳನ್ನು ಕೇಳಬೇಕು. ಅವರು ಹೇಳುವುದೆಲ್ಲಾ ಸರಿ. ನೀವು ಅದನ್ನು ತಲೆಬಾಗಿ ಸ್ವೀಕರಿಸಬೇಕು...ಈಗ ಅವರು ಉಪ ಆಚಾರ್ಯರು. ಆದ್ದರಿಂದ ಎಲ್ಲರೂ ಅವರ ಮಾತುಗಳನ್ನು ಕೇಳಬೇಕು" ಎಂದು ನಾವು ಹೇಳುತ್ತೇವೆ ಎಂದಿಟ್ಟುಕೊಳ್ಳಿ, ಈ ರೀತಿಯಾದರೆ, ಎಲ್ಲಿಯವರೆಗೆ ಅಧಿಕಾರ ನಡೆಯುತ್ತದೆ? ನನ್ನ ಜೀವನದಲ್ಲಿ ಜನರು ಈ ವ್ಯಕ್ತಿಗೆ ಅಗೌರವ ತೋರಿಸುತ್ತಾರೆ. ಆ ನಂತರದಲ್ಲಿ ಧರ್ಮ ಬೋಧನೆಯ ಇಡೀ ವ್ಯವಸ್ಥೆಯಲ್ಲಿ ಈ ವ್ಯಕ್ತಿಗೆ ಯಾವ ಸ್ಥಳವೂ ಇಲ್ಲ.

ಯಾವ ರೀತಿಯಲ್ಲಿ ವ್ಯಕ್ತಿಯು ಸೇವೆಯನ್ನು ಮಾಡಬೇಕೆಂದರೆ, ಪ್ರತಿಯೊಬ್ಬ ವಿದ್ಯಾರ್ಥಿಯೂ ಆ ವ್ಯಕ್ತಿಯ ಬಗೆಗೆ ಪ್ರೀತಿ ತೋರಿಸಬೇಕು. ಇದು ಆಗದಿದ್ದರೆ ಬರೀ ಅಧಿಕಾರದ ಹೇರಿಕೆಯಾಗುತ್ತದೆ. ಇದು ನಿರಂಕುಶ ಅಧಿಕಾರವಲ್ಲ, ಇದು ಸೇವೆ. ಆದ್ದರಿಂದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಪ್ರೀತಿ ಮತ್ತು ಗೌರವ ಬೆಳೆಯುವಂತೆ ಸೇವೆ ಮಾಡಿ. ಈ ರೀತಿಯಾಗಿಯೇ ನಿಮ್ಮ ಸೇವೆಯು ಒಳ್ಳೆಯ ಫಲಗಳನ್ನು ಕೊಡುವುದು. ನೀವು ಅಧಿಕಾರವನ್ನು ಹೇರಲು ಪ್ರಾರಂಭಿಸಿದರೆ, ನೀವು ಎಂದಿಗೂ ಯಶಸ್ವಿ ಬೋಧಕರಾಗುವುದಿಲ್ಲ.

"ಈ ವ್ಯಕ್ತಿಯನ್ನು ಸಹಾಯಕ ಆಚಾರ್ಯರಾಗಿ ನೇಮಿಸಲಾಗಿದೆ. ನಾನು ನನ್ನ ಆಚಾರ್ಯರ ಬಗೆಗೆ ಮತ್ತು ಆಚಾರ್ಯರುಗಳ ಪರಂಪರೆಗೆ ಅತೀವ ಗೌರವ ಹೊಂದಿದ್ದೇನೆ. ಬುದ್ಧರ ಬಗೆಗೂ ನನಗೆ ಅಪಾರವಾದ ಗೌರವವಿದೆ. ಸೇವೆ ಕೊಡಲು ಈ ವ್ಯಕ್ತಿಯನ್ನು ನಮ್ಮ ಆಚಾರ್ಯರು ನೇಮಿಸಿದ್ದಾರೆ. ಈಗ ಈ ವ್ಯಕ್ತಿಯು ಧರ್ಮ ಪೀಠದ ಮೇಲೆ ಕುಳಿತು ಧರ್ಮದ ಪ್ರತಿನಿಧಿಯಾಗಿದ್ದಾರೆ" ಎಂದು ವಿದ್ಯಾರ್ಥಿಗಳು ಯೋಚಿಸಬೇಕು.

ವಿದ್ಯಾರ್ಥಿಯು ಸಹಾಯಕ ಆಚಾರ್ಯರ ಬಗ್ಗೆ ಯಾವಾಗಲೂ ಗೌರವ ಭಾವನೆಯನ್ನು ಹೊಂದಿರುತ್ತಾರೆ. ಆದರೆ ಆಚಾರ್ಯರ ನಡವಳಿಕೆಯು ಈ ಗೌರವ ಭಾವವನ್ನು ಬಲಗೊಳಿಸಬೇಕು.

ಆಚಾರ್ಯರು ವಿನಮ್ರತೆಯ, ಪ್ರೀತಿ ಮತ್ತು ಕರುಣೆಯ ಗುಣವನ್ನು ಹೊಂದಿರದಿದ್ದರೆ ಈ ವ್ಯಕ್ತಿಯು ಎಂದಿಗೂ ಯಶಸ್ವಿ ಆಚಾರ್ಯರಾಗುವುದಿಲ್ಲ. ಅವರು ಧರ್ಮ ಪೀಠದ ಮೇಲೆ ಕುಳಿತರೂ ಅದು ಕೆಲಸ ಮಾಡುವುದಿಲ್ಲ. ಆಚಾರ್ಯರು ಮತ್ತು ವಿದ್ಯಾರ್ಥಿಗಳ ಮಧ್ಯೆ ಈ ರೀತಿಯ ಸಂಬಂಧಗಳ ಅವಶ್ಯಕತೆಯಿದೆ.

**ಬಳ್ಳಾರಿಯಲ್ಲಿ ಹತ್ತು ದಿನದ ಧ್ಯಾನ ಶಿಬಿರ**

ಶಿಬಿರದ ದಿನಾಂಕ : 2023ರ ಏಪ್ರಿಲ್ 20 ರಿಂದ ಮೇ 1 ರವರೆಗೆ

ಭಾಷೆ : ಕನ್ನಡ ಮತ್ತು ಇಂಗ್ಲಿಷ್

ಸ್ಥಳ : ಬಾಲಭಾರತಿ ಕೇಂದ್ರೀಯ ವಿದ್ಯಾಲಯ, ತಾಲ್ಲೂರು ರಸ್ತೆ, ಬಳ್ಳಾರಿ.

ನೋಂದಣಿ ಮತ್ತು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ :

ಡಾ॥ ಮಲ್ಲಿಕಾರ್ಜುನ ಅಂಗಡಿ 8217339591, ನರೇಶ್ ಚಿರಾನಿ 9448060012, ಬಸವರಾಜ್ 9986677012, ಕಿಶೋರ್‌ಕುಮಾರ್94480 35548, ಮಂಜುನಾಥ್ 9035645683, ಸಿದ್ಧಾರ್ಥ ಚಿರಾನಿ 8277029945, ಸಂತೋಷ್ ಧರ್ಮರಾಜ್ 8762086089,ಜಿ.ಟಿ. ಗೋವಿಂದಪ್ಪ 94485 88789.

**ಧಮ್ಮ ಪಫುಲ್ಲಾ, ಬೆಂಗಳೂರು**

**10 ದಿನದ ಶಿಬಿರಗಳು** :2023 :ಫೆಬ್ರವರಿ 24–7 ಮಾರ್ಚ್ 10–21, 29–9 ಏಪ್ರಿಲ್ 12–23, 26–7 ಮೇ 24–4 ಜೂನ್ 7–18, 21–2 ಜುಲೈ

**ವಿಳಾಸ :** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಎದುರಿನ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ ಬಸ್ ನಿಲ್ದಾಣದಿಂದ (ಮೆಜೆಸ್ಟಿಕ್) ನಗರ ಸಾರಿಗೆ ಬಸ್ ಸಂಖ್ಯೆ :256,258,258ಸಿ. ಸಂಪರ್ಕ ಸಂಖ್ಯೆಗಳು: 99725 88377, 63615 70725, 99725 88377, 99009 55930. **ಇ–ಮೇಲ್** : info@ paphulla. dhamma. org;website; www.vridhamma. org.

**ಧಮ್ಮ ನಗರಿ ವಿಪಶ್ಯನ ಧ್ಯಾನ ಕೇಂದ್ರ ದಾವಣಗೆರೆ.**

**10 ದಿನದ ಶಿಬಿರಗಳು** :–2023, ಜನವರಿ 3–14 ಫೆಬ್ರವರಿ 15–26 ಮಾರ್ಚ್ 24–4 ಏಪ್ರಿಲ್ ನೋಂದಣಿ ಮಾಡಿಕೊಳ್ಳಲು ಈ ಮುಂದಿನ ಲಿಂಕ್ ಅನ್ನು ಉಪಯೋಗಿಸಿಕೊಳ್ಳಿ:

ಮೂರು ದಿನದ ಶಿಬಿರ : ಈಗಾಗಲೇ ಕನಿಷ್ಠ ಒಂದು ಹತ್ತು ದಿನದ ಶಿಬಿರ ಪೂರೈಸಿರುವವರಿಗೆ ಮಾತ್ರ. ಮಾರ್ಚ್ 9 ರಿಂದ 12 ರ ಸಾಯಂಕಾಲದವರೆಗೆ.

https://www.dhamma.org/en/schedules/v2/noncenter/davanagere.in#normal.

**ನೋಂದಣಿ ಸಹಾಯ ಬೇಕಾದರೆ ಸಂಪರ್ಕಿಸಿ :** ಅಭಿಷೇಕ ರಾಮ್ +91 90087 33008

**ಧಮ್ಮ ನದಿ, ವಿಪಶ್ಯನ ಧ್ಯಾನಕೇಂದ್ರ ಉಡುಪಿ ಜಿಲ್ಲೆ**

ನಿರ್ಮಾಣ ಕಾರ್ಯ ಆರಂಭವಾಗಿದೆ. ಪ್ರತಿ ಭಾನುವಾರ ಬೆಳಿಗ್ಗೆ 9 ರಿಂದ 1 ರವರೆಗೆ ಧ್ಯಾನ ಕಾರ್ಯಕ್ರಮ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 9449773942, 9880173542, 8792173942.

**ಧಮ್ಮ ಸುಖಾಲಯ, ಬೆಂಗಳೂರು.**

ಪ್ರತಿ ಭಾನುವಾರ ಒಂದು ದಿನದ ಶಿಬಿರವಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಪ್ರಕಾಶ್‌ಚಂದ್ರ 89898 66927, ಚೆಲುವರಾಜು 9900452939, ಸಂತೋಷ್ ಧರ್ಮರಾಜ್ 8762086089 ನೋಂದಣಿಗೆ:https:/sukhalaya. dhamma.org/en/tapodana.

ದಾರಿ ತೋರಿಸಲು: https://maps.app.goo.gl/EVGKU

**ಧಮ್ಮವನ, ಅಂತರರಾಷ್ಟ್ರೀಯ ವಿಪಶ್ಯನ ಧ್ಯಾನಕೇಂದ್ರ,**
**ನಾಡಪ್ಪನಹಳ್ಳಿ – 571 617, ಮೈಸೂರು ಜಿಲ್ಲೆ.**

ನಿರಂತರಾಗಿ 2 ಮತ್ತು ಮೂರು ದಿನದ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಲು: www.dhamma.org/schedules/schvana.

ಹೆಚ್ಚಿನ ಮಾಹಿತಿಗೆ : 88805 19658

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು: ಬಿ.ಪ್ರದೀಪ ಕುಮಾರ, ಪ್ರಕಾಶಕರು: ಶ್ರೀಮತಿ ಆರ್. ಚಂದ್ರಮತಿ** ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ.
**ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070. **ಗೌರವ ಸಂಪಾದಕರು: ಜಿ.ಟಿ. ಗೋವಿಂದಪ್ಪ**

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor: G.T. Govindappa,**

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.

ಗೆ,